

# ವೃಷಣಗಳ ತಿರುಚುವಿಕೆ

**ಸುಮಾರು ನಾಲ್ಕು ಸಾವಿರ ಮಕ್ಕಳಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳುವ ವೃಷಣಗಳ ತಿರುಚುವಿಕೆಗೆ ತಕ್ಷಣವೇ ಚಿಕಿತ್ಸೆ ಕೊಡಿಸಬೇಕು. ಚಿಕಿತ್ಸೆ ವಿಳಂಬವಾದಲ್ಲಿ ವೃಷಣಗಳ ರಕ್ತ ಪರಿಚಲನೆಯಲ್ಲಿ ವ್ಯತ್ಯಯ ಉಂಟಾಗಿ ಮುಂದೆ ತೊಂದರೆಯಾಗಬಹುದು.**

■ ಡಾ. ವಿನಯ ಶ್ರೀನಿವಾಸ್

## ಟಾರ್ಷನ್ ಆಫ್ ಟೆಸ್ಟಿಸ್

ಗೆಳತಿ ಕರೆ ಮಾಡಿ, ತನ್ನ ಇಪ್ಪತ್ತರ ಹರೆಯದ ಮಗ ಬೆಳಿಗ್ಗೆ ಎದ್ದಾಗಿನಿಂದ ವೃಷಣಗಳಲ್ಲಿ ತೀವ್ರವಾದ ನೋವು ಎಂದು ಒದ್ದಾಡತೊಡಗಿದ್ದಾನೆ, ಏನಾದರೂ ಮಾತ್ರೆ ಹೇಳ್ತಿಯಾ, ಔಷಧ ಅಂಗಡಿಯಿಂದ ತಂದು ಕೊಡುತ್ತೇನೆ ಎಂದು ಕೇಳಿದ್ದಳು. ನಾನು ವೃಷಣಗಳಲ್ಲಿನ ನೋವು ಹೆಚ್ಚಿನ ಸಂದರ್ಭಗಳಲ್ಲಿ, ಅವುಗಳ ತಿರುಚುವಿಕೆಯ ಸೂಚನೆಯಿರಬಹುದು. ಕೂಡಲೇ ಶಸ್ತ್ರಚಿಕಿತ್ಸಾ ತಜ್ಞರ ಬಳಿ ಕರೆದುಕೊಂಡು ಹೋಗು ಎಂದಿದ್ದೆ. ಸಂಜೆಯ ವೇಳೆಗೆ ಮತ್ತೆ ಕರೆ ಮಾಡಿ, 'ನೀನು ಊಹಿಸಿದಂತೆಯೇ ಆಯಿತು. ಸದ್ಯ ಆಪರೇಶನ್ ಆಗಿ ಆಸ್ಪತ್ರೆಯಲ್ಲಿದ್ದಾನೆ, ವೈದ್ಯರು ಏನೂ ತೊಂದರೆಯಿಲ್ಲ ಎಂದಿದ್ದಾರೆ' ಎಂದಿದ್ದಳು.

ಹೌದು, ಹದಿನೆಂಟರಿಂದ ಇಪ್ಪತ್ತೈದರ ಹರೆಯದ ಹುಡುಗರಲ್ಲಿ ಅಪರೂಪಕ್ಕೆ ಕಾಣಿಸಿಕೊಳ್ಳುವ ವೃಷಣಗಳ ತಿರುಚುವಿಕೆಯ ಬಗ್ಗೆ ಪ್ರತಿಯೊಬ್ಬರೂ ತಿಳಿದಿದ್ದರೆ ಒಳಿತು. ಸುಮಾರು ನಾಲ್ಕು ಸಾವಿರ ಮಕ್ಕಳಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳುವ ಈ ವೃಷಣಗಳ ತಿರುಚುವಿಕೆಗೆ ತಕ್ಷಣವೇ ಚಿಕಿತ್ಸೆ ಕೊಡಿಸಬೇಕು. ಚಿಕಿತ್ಸೆ ವಿಳಂಬವಾದಲ್ಲಿ ವೃಷಣಗಳ ರಕ್ತ ಪರಿಚಲನೆಯಲ್ಲಿ ವ್ಯತ್ಯಯ ಉಂಟಾಗಿ, ಅವುಗಳಲ್ಲಿನ ಜೀವಕೋಶಗಳು ಮರಣ ಹೊಂದಬಹುದು. ಹಾಗಾದಾಗ ವೃಷಣಗಳು ನಿಷ್ಪ್ರಯೋಜಕವಾಗುತ್ತವೆ. ಆಗ ಅವುಗಳನ್ನು ದೇಹದಿಂದ ಬೇರ್ಪಡಿಸಿ ತೆಗೆಯಬೇಕಾಗುತ್ತದೆ. ವೃಷಣಗಳು ಪುರುಷರಲ್ಲಿ ಪುರುಷತ್ವಕ್ಕೆ ಸಂಬಂಧಿಸಿದ ರಸದೂತಗಳನ್ನು ಹಾಗೂ ಸಂತಾನೋತ್ಪತ್ತಿಗೆ ಅವಶ್ಯಕವಾದ ವೀರ್ಯಾಣುಗಳನ್ನು ಉತ್ಪತ್ತಿ ಮಾಡುತ್ತವೆ. ಜನನಾಂಗದ ಭಾಗವಾಗಿರುವ ವೃಷಣಕೋಶದಲ್ಲಿ ಎರಡು ವೃಷಣಗಳು ಇರುತ್ತವೆ.